

ಅನುಭವಿಸಿಕೊಂಡಾದರೂ ಸಂಸಾರವನ್ನು ಉಳಿಸುವ ಜವಾಬ್ದಾರಿ ಕೇವಲ ಹೆಣ್ಣಿನದ್ದು ಎನ್ನುವ ನಂಬಿಕೆ ಸಮಾಜದ ನಿಯಮವಾಗಿದೆ. ಅದಕ್ಕಾಗಿ ಹೆಣ್ಣುಮಕ್ಕಳಿಗೆ ಹೆಚ್ಚಾಗಿ ಶಿಕ್ಷಣ ಕೊಡಿಸುವುದಿಲ್ಲ. ಕೊಡಿಸಿದರೂ ಇಂಥದ್ದೇ ಶಿಕ್ಷಣ ಪಡೆಯಬೇಕೆಂಬ ಒತ್ತಡಗಳಿರುತ್ತವೆ. ಶಿಕ್ಷಣ ಪಡೆದ ನಂತರವೂ ಉದ್ಯೋಗಕ್ಕೆ ಹೋಗದೆ ಮನೆಸಂಸಾರ ನೋಡಿಕೊಂಡು ಇರಬೇಕಾದ ಸಾಮಾಜಿಕ, ಕೌಟುಂಬಿಕ ವಾತಾವರಣವನ್ನು ಸೃಷ್ಟಿಸುತ್ತೇವೆ. ಅಡುಗೆ ಮಾಡುವುದು, ಪಾತ್ರೆ ಬಟ್ಟೆ ತೊಳೆಯುವುದು, ಮನೆಯನ್ನು ಶುಚಿಯಾಗಿಡುವುದು – ಇವನ್ನು ಹೆಣ್ಣುಮಕ್ಕಳಿಗೆ ಕಡ್ಡಾಯವಾಗಿ ಕಲಿಸುತ್ತೇವೆ. ಗಂಡುಮಕ್ಕಳಿಗೆ ಕಲಿಸುವುದು ಮಾತ್ರವಲ್ಲ, ಕುಳಿತಲ್ಲಿಗೇ ಎಲ್ಲಾ ಮಾಡಿಕೊಡುತ್ತೇವೆ. ಹೆಣ್ಣು ಹೆಚ್ಚು ಸಂಯಮಿ, ತಾಳ್ಮೆ ಉಳ್ಳವಳು, ತಾಯಿ, ದೇವಿ ಎನ್ನುವ ವಿಶೇಷಣಗಳ ಆರೋಪ ಹೊರಿಸುವುದೂ ಇಷ್ಟಕ್ಕೇ – ಈ ನಮ್ಮ 'ಸುಖ ಸಂಸಾರ'ದ ಪರಿಕಲ್ಪನೆಯನ್ನ ಕಾಯ್ದುಕೊಳ್ಳಲು. ಇದಕ್ಕಾಗಿಯೇ ತಯಾರುಮಾಡುವ ಒಂದು ಚೌಕಟ್ಟಿನೊಳಗೆ ಹೆಣ್ಣನ್ನು ತುರುಕಿ ಇಡುತ್ತೇವೆ. ಗಂಡಸು ಕೂಡಾ ಇಂಥದ್ದೇ ಶಿಕ್ಷಣ ಪಡೆಯಬೇಕು, ಎಂಥದ್ದೇ ಕೆಲಸ ಮಾಡಬೇಕು ಎಂಬ ಹೊರೆ ಹೊರಿಸಿ, ಆತ ಮನೆಯ ಕೆಲಸ ಮಾಡಿದರೆ 'ಹೆಣ್ಣಿಗ' ಎಂಬ ಪಟ್ಟ ಕಟ್ಟಿ ಅವನನ್ನು ಹೀಯಾಳಿಸುತ್ತೇವೆ. ನಮ್ಮ ಪರಿಕಲ್ಪನೆಯ 'ಸಂಸಾರ'ದಲ್ಲಿ ಗಂಡ ಮುಂದೆ ಹೋಗಬೇಕು, ಹೆಂಡತಿ ಅವನನ್ನು ಹಿಂಬಾಲಿಸಬೇಕು. ಇದನ್ನು ಹೆಣ್ಣು ಪರಿಪಾಲಿಸುವುದು ಮಾತ್ರವಲ್ಲ, ಅನುಮೋದಿಸುತ್ತಿರುತ್ತಾಳೆ ಕೂಡಾ. ಈ ನಮ್ಮ 'ಸಂಸಾರ', 'ಸಮಾಜ'ದ ಪರಿಕಲ್ಪನೆಗೆ ಗಂಡು, ಹೆಣ್ಣು – ಎಲ್ಲರೂ ಬಲಿಯಾಗಿದ್ದೇವೆ.

## ಅಂಕುಶದ ರೂಪಗಳು ನೂರಾರು

ಗಂಡು ಹೇಗೆ ವರ್ತಿಸಬೇಕು, ಹೆಣ್ಣು ಹೇಗೆ ವರ್ತಿಸಬೇಕು, ಹೇಗಿರಬೇಕು ಎನ್ನುವ ಅಘೋಷಿತ, ಆದರೂ ನಮ್ಮ ನಡತೆ, ಆಯ್ಕೆ, ರೀತಿನೀತಿಗಳಲ್ಲಿ ವ್ಯಕ್ತವಾಗುವ ಸಮಾಜದ ಕಟ್ಟಳೆಗಳಿವೆ. ಹೀಗೆ ಜನರು ನಿಗದಿಪಡಿಸುವ ಈ 'ಪಾತ್ರ'ಗಳನ್ನು ಮೀರುವ, ಉಲ್ಲಂಘಿಸುವ ಪ್ರಯತ್ನ ಯಾರೇ ಮಾಡಿದರೂ ಅವರಿಗೆ ಶಿಕ್ಷೆಯಾಗುತ್ತದೆ. ಕೊಂಕುಮಾತು, ಬೈಗುಳಗಳ ಮೂಲಕ, ಹೊಡೆಯುವುದು ಇನ್ನಿತರ ದೈಹಿಕ ಹಿಂಸಾಚಾರದ ಮೂಲಕ, ಅತ್ಯಾಚಾರ, ಆ್ಯಸಿಡ್ ದಾಳಿ – ಹೀಗೆ, ಹೆಣ್ಣಿನ ಮೇಲೆ ಸಾಧಿಸುವ ಹಿಡಿತದ ರೀತಿಗಳಿಗೆ

**2012ರಲ್ಲಿ ಭಾರತದಲ್ಲಿ 24,923 ರೇಪ್ ಪ್ರಕರಣಗಳು ದಾಖಲಾಗಿವೆ (ಎನ್.ಸಿ.ಆರ್.ಬಿ ವರದಿ); ಇದೇ ವರದಿಯ ಅಂದಾಜಿನ ಪ್ರಕಾರ ಶೇ 70 ಪ್ರಕರಣಗಳು ದಾಖಲಾಗದೇ ಉಳಿಯುತ್ತವೆ. ವರದಿ ಆದವುಗಳಲ್ಲಿ ಶೇ 98 ಪ್ರಕರಣಗಳಲ್ಲಿ ತಿಳಿದ ವ್ಯಕ್ತಿಯಿಂದಲೇ ಕೃತ್ಯವೆಸಗಲಾಗಿದೆ.**

ಹಲವು ವಿಕೃತ ರೂಪಗಳು. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ಮೂಲ, ಈ ಹಿಂಸೆಗಳಿಗೆ ಅನುಮೋದನೆ, ಬಲ ಹೀಗೆ ನಮ್ಮಲ್ಲಿ ಬೇರೂರಿರುವ ಲಿಂಗಪಾತ್ರಗಳಿಂದ, ತಾರತಮ್ಯದ ನಡತೆಗಳಿಂದ ಬರುತ್ತದೆ.

## ಕಾನೂನಿನ ಅಗತ್ಯ

ಕಾನೂನು ಹಾಗೂ ಕಾನೂನು ಸೂಚಿಸುವ ಹಕ್ಕುಗಳ ಪಾತ್ರ ಮುಖ್ಯವಾಗುವುದು ಇಲ್ಲಿ. ಸತಿಸಾವು, ವರದಕ್ಷಿಣೆ, ಬಾಲ್ಯವಿವಾಹ – ಎಲ್ಲವೂ ಸರ್ವೇಸಾಮಾನ್ಯ ಹಾಗೂ ಕಾನೂನುಬಾಹಿರವಲ್ಲದ ಕಾಲ ಒಂದಿತ್ತು. ಅನೇಕ ವರ್ಷಗಳ ಕಾಲ ಸಮಾಜ ಸುಧಾರಕರು ಮಾಡಿದ ಚಳವಳಿಗಳ ಪರಿಣಾಮವಾಗಿ, ಇವುಗಳನ್ನು ಕಾನೂನು ಬಾಹಿರ ಮಾಡುವ ಕಾನೂನು ಬಂದು, ಈ ಆಚರಣೆ, ಕೃತ್ಯ ಮಾಡಿದವರಿಗೆ ಕಾನೂನಿನ ಮೂಲಕ ಶಿಕ್ಷೆ ಘೋಷಿಸಿದಾಗ ಆ ಮೂಲಕ ಜನರಲ್ಲಿ ಇದರ ಬಗ್ಗೆ ಅರಿವು ಮೂಡಿಸುವುದು ಸಾಧ್ಯವಾಯಿತು. ಆದರೂ ಸತಿ ಸಾವು ಈಗಲೂ ನಡೆಯುವುದಿದೆ. ವರದಕ್ಷಿಣೆ, ಬಾಲ್ಯವಿವಾಹಗಳನ್ನಂತೂ ಇನ್ನೂ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ.

ಶಿಕ್ಷಿತ, ಮಧ್ಯಮವರ್ಗದ, ಶ್ರೀಮಂತರ ಸಮಾಜದಲ್ಲೂ ವರದಕ್ಷಿಣೆ ಹಾಗೂ ವರದಕ್ಷಿಣೆ ಹಿಂಸೆ, ಕೊಲೆ, ಸಾವು ಅಪಾಯಕರ ಮಟ್ಟದಲ್ಲಿ ಇನ್ನೂ ನಡೆಯುತ್ತವೆ. ಅಂದರೆ, ಶಿಕ್ಷಿತ ಜನರ ಮನಸ್ಸಿನಲ್ಲೂ ಹೆಣ್ಣುಗಂಡಿನ ನಿಗದಿತ ಪಾತ್ರಗಳು ಹಾಗೆಯೇ ಇವೆ. ಮದುವೆ, ಸಂಸಾರ ಅನ್ನುವುದು ಹೆಣ್ಣಿನ ಜೀವನದ ಅತ್ಯಂತ ಪ್ರಮುಖ (ಏಕಮೇವ) ಗುರಿ, ಸಾರ್ಥಕತೆಯಾಗಿ ಜನರು ಕಾಣುತ್ತಾರೆ. ಯಾವುದೇ ಕಾರಣಕ್ಕೂ ಈ 'ಸಂಸಾರ'ದ ಪರಿಕಲ್ಪನೆ ಅಲ್ಲಾಡದಂತೆ ಸಮಾಜ, ಜನರು, ಕುಟುಂಬಗಳು, ವ್ಯವಸ್ಥೆಯಲ್ಲಿನ ಜನರೂ ಕಾಪಾಡಿಕೊಂಡು ಬರುತ್ತಾರೆ.

## ಐಪಿಸಿ ಸೆ. 498-ಎ

ಭಾರತದಲ್ಲಿ, ಶೇ. 38 ಜನ ಗಂಡಸರು, ತಮ್ಮ ಸಂಗಾತಿಯನ್ನು ಹೊಡೆದಿರುವುದನ್ನು, ದೈಹಿಕವಾಗಿ ಹಿಂಸಿಸಿರುವುದನ್ನು ಐಸಿಆರ್‌ಡಬ್ಲ್ಯೂ 2010ರಲ್ಲಿ ಮಾಡಿದ ಸಮೀಕ್ಷೆಯಲ್ಲಿ ಹೇಳಿಕೊಂಡಿದ್ದಾರೆ. 2005ರ ಮೊದಲು ಈ ಹಿಂಸೆಗಳ ನಿಯಂತ್ರಣಕ್ಕೆ